ನಾನು ಎದ್ದು ನಿಂತೆ.

'ನಾನಿನ್ನು ಬರ್ತೀನಿ' ಅಂದೆ.

'ಅದೇನ್ರಿ ಸಡನ್ನಾಗಿ?' ಅಂದಳಾಕೆ ತುಂಬಾ ಆಶ್ಚರ್ಯದಿಂದ.

'ಮತ್ತಿನ್ನೇನ್ರಿ... ಏನೋ ಊರಿನ ಕತೆ ಹಜಾಮರ ಡಾಕ್ಟರ ಕಥೆ ಹೇಳ್ತಿದ್ದಾರೆ ಅಂತ ಆಸಕ್ತಿಯಿಂದ ಬಂದರೆ ಇದೇನಾ ನೀವು ಹೇಳೋದು... ಜೇಬಿನಿಂದ ಒಂದೊಂದಾಗಿ ಒಂದೊಂದಾಗಿ ಕಷ್ಟಗಳನ್ನು ತೆಗಿತಿದೀರಿ. ಏನು ಕೇಳೋದು?'

ಆಕೆ ತುಂಬಾ ಹೊತ್ತು ನಕ್ಕಳು.

'ಅಬ್ಬಾ... ಎಷ್ಟು ದಿನಗಳಾಗಿತ್ತುರೀ ಹೀಗೆ ನಕ್ಕು' ಅಂದಳು.

'ಕೂತ್ಕೊಳ್ರೀ ಸಾಕು ನಿಜವಾದ ಕಷ್ಟ ಇನ್ನೂ ಶುರುವೇ ಆಗಿಲ್ಲ. ಕೇಳದೆ ಹೇಗೆ ಹೋಗ್ತೀರಿ?'

ನಾನು ಕುಳಿತುಕೊಂಡೆ.

ಆಕೆ ಶುರು ಮಾಡಿದಳು.

'ಕ್ಯಾನ್ಸರ್ ಟ್ರೀಟ್ ಮಾಡ್ತಾರೆ ನೋಡಿ... ಹೆಚ್ಚು ಕಡಿಮೆ ಹಾಗೆ ಟ್ರೀಟ್ ಮಾಡಿದ್ರು ನನ್ನ ಕಂಗಳನ್ನು. ಒನ್ ಮಂಥ್ ರೆಸ್ಟ್ ತೆಗೆದುಕೊಳ್ಳಲು ಹೇಳಿದರು. ಅಂದರೆ ಹಾಸ್ಪಿಟಲ್‌ಗೆ ಹೋಗದೆ ಮನೆಯಲ್ಲೇ ಇರಬೇಕು. ಆಗ ನಾನು ಒಂದು ಹಾಸ್ಪಿಟಲ್‌ನಲ್ಲಿ ಕೆಲಸ ಮಾಡ್ತಿದ್ದೆ. ಹೋಗಿ ವಿಷಯ ಹೇಳಿದರೆ ಒನ್ ಮಂಥ್ ಅಂದ್ರೆ ಹೇಗ್ರೀ... ನೀವೇ ಆಲೋಚನೆ ಮಾಡಿ ಅಂದರು ಮರ್ಯಾದೆಯಿಂದ. ಬಿಟ್ಬಿಡಿ ಅಂತ ಇನ್‌ಡೈರೆಕ್ಟ್ ಆಗಿ ಹೇಳಿದರು ಅಂತ ಅರ್ಥ.

ಈ ಕಡೆ ನನ್ನ ಆರೋಗ್ಯದ ವಿಷಯ ತಿಳಿದು ಆ ಕಡೆ ರಿಯಾದ್‌ನಲ್ಲಿ ನನ್ನ ಮನೆಯವರ ಪರಿಸ್ಥಿತಿ ಕೂಡಾ ಹಾಗೇ ಇತ್ತು. ಬಾಂಡ್ ಬ್ರೇಕ್ ಮಾಡಿ ಕಳಿಸಿಕೊಡಲು ಅವರು ಒಪ್ಪಲಿಲ್ಲ. ಹಾಗೂ ಒಂದು ವೇಳೆ ಹೋಗಬೇಕೆಂದುಕೊಂಡರೆ ಆಗಬಹುದಾದ ನಷ್ಟವನ್ನು ಕಂಪೆನ್ಸೇಟ್ ಮಾಡಿ ಹೋಗಿ ಅಂದರಂತೆ. ಏನು ಮಾಡೋದು ಅಂತ ಫೋನ್ ಮಾಡಿದ್ದರು ಅವರು.

ನನಗ್ಯಾಕೋ ಒಮ್ಮೆಗೇ ನಮ್ಮ ತಾತ ನೆನಪಾದ. ಕತ್ತರಿಸಿ ಬಿದ್ದಿರೋ ಕೂದಲು ಯಾವನು ಎತ್ತಿಕೊಂಡು ಹೋಗ್ತಾನೋ ಅಂತ ಕೇಳುತ್ತಿರುವ ಮನುಷ್ಯನ ಎದುರು ನಿಂತಿರೋದು ನಮ್ಮ ತಾತ ಅಲ್ಲ, ನಾನು ನನ್ನ ಗಂಡ ಅನ್ನಿಸಿಬಿಟ್ಟಿತು ನನಗೆ. ಇಷ್ಟು ವರ್ಷಗಳ ಕಾಲ ನಾವು ಓಡಿದ ಓಟ ಎಲ್ಲಿಗೆ ಹೋಗಿ ತಲುಪಿಸಿತು ಅನ್ನೋದು ಕೂಡ ಅರ್ಥವಾಯಿತು.

ಇನ್ನು ನಿಧಾನವಾಗಿ ಡಿಪ್ರೆಷನ್ ಶುರುವಾಯಿತು. ನನ್ನ ಹಿಡಿತ ಮೀರಿ ಹೋದ ಡಿಪ್ರೆಷನ್. ಸುಮ್ಮಸುಮ್ಮನೆ ಅಳು ಬರೋದು. ಒಂದೊಂದು ಸಲ ಹುಚ್ಚು ಹಿಡಿದಂತಾಗೋದು. ಗಟ್ಟಿಯಾಗಿ ಬೆರಳು ಕಡಿದುಕೊಳ್ತೋಳು. ನನ್ನ ಪರಿಸ್ಥಿತಿ ಗಮನಿಸಿದ ನನ್ನ ಫ್ರೆಂಡ್ ಒಬ್ಬಾಕೆ ನನ್ನ ಧ್ಯಾಸ ಮರಳಿಸಲು ಏನೇನೋ ಪ್ರಯತ್ನ ಮಾಡಿದಳು. ಯೋಗಕ್ಕೆ ಕರೆದುಕೊಂಡು ಹೋದಳು. ಧ್ಯಾನ ಮಾಡಿಸಿದಳು. ಆಗಲೇ ಕೆಲವು ಪುಸ್ತಕಗಳೊಂದಿಗೆ ನಿಮ್ಮ ಪುಸ್ತಕಗಳನ್ನೂ ತಂದು ಕೊಟ್ಟಳು. ನನಗೆ ಲಿಟರೇಚರ್ ಗೊತ್ತಿಲ್ಲ. ಆದರೆ ನಿಮ್ಮ ಪುಸ್ತಕಗಳು ಇಷ್ಟವಾದವು. ನಮ್ಮ ಪ್ರದೇಶ, ನಮ್ಮ ಭಾಷೆ... ಪುಸ್ತಕಗಳು ನನಗೆ ಹೊಸ ಫ್ರೆಂಡ್ಸ್ ಆದವು. ಆಮೇಲೆ ಸಾಕಷ್ಟು ಓದಿದೆ.

ಆದರೆ ಆ ಡೋಸ್ ನನಗೆ ಸಾಕಾಗಲಿಲ್ಲ. ಇನ್ನೂ ಏನೋ ಬೇಕನ್ನಿಸ್ತಿತ್ತು. ಒಂದು ಕಡೆ ಕೆಲಸ ಬಿಟ್ಟು ಪೇಶೆಂಟ್ ಆಗಿ ಮನೆಯಲ್ಲಿ ಕೂತಿರಬೇಕಾದ ಒಂಟಿತನ. ಮತ್ತೊಂದು ಕಡೆ ಅಗತ್ಯವಿದ್ದ ಸಮಯದಲ್ಲಿ ಗಂಡ ಜೊತೆಗಿಲ್ಲದೇ ಇದ್ದುದು... ಎಲ್ಲ ಸೇರಿ ಡಿಪ್ರೆಷನ್ ಮತ್ತಿಷ್ಟು ಹೆಚ್ಚಾಯಿತು.

ಅಂಥ ಪರಿಸ್ಥಿತಿಯಲ್ಲಿ ಯಾರಿಗಾದರೂ ಏನನಿಸುತ್ತದೆ? ಸ್ವಲ್ಪ ಪ್ರೀತಿ ಬೇಕನಿಸುತ್ತದೆ.